ಇ) ಈ ಪೊಲೀಸ್ ಪೆರೇಡ್ ಜಾಗಕ್ಕೆ ಕಾಂಪೌಂಡ್ ಗೋಡೆ ಕಟ್ಟುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಎಂದು ಕೈಗೊಳ್ಳ ಲಾಗುವುದು?

ಶ್ರೀ ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ) ಇಲ್ಲ.

ಆ) ಫ್ಯಾಟಿಗ್ ಡ್ಯೂಟಿ ಮೂಲಕ (Fatigue Duty) (ಇಲಾಖೆಯಲ್ಲಿನ ವಿವಿಧ ಗುಂಪಿನ ಸಿಬ್ಬಂದಿಗಳಿಂದ ಶ್ರಮದಾನದ ಮೂಲಕ) ಸ್ವಚ್ಚತಾ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

ಇ) ಸದ್ಯಕ್ಕೆ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ದೇವಸ್ಥಾನಗಳ ಅಭಿವೃದ್ಧಿ

124 (417) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ವಿಧಾನಸಭಾ ಕ್ಷೇತ್ರದಲ್ಲಿ ಮುಜರಾಯಿ ಇಲಾಖೆಯಲ್ಲಿ ನೋಂದಣಿಯಾದ ದೇವಸ್ಥಾನಗಳು ಎಷ್ಟು ; ಅವು ಯಾವುವು;

ಆ) ದಿನಾಂಕ: 01–06–2008 ರಿಂದ ದಿನಾಂಕ: 31.12.2009ರ ಅವಧಿಯಲ್ಲಿ ಇಂಡಿ ವಿಧಾನಸಭಾ ಕ್ಷೇತ್ರದ ಯಾವ ಯಾವ ದೇವಸ್ಥಾನಗಳ ಸುಧಾರಣೆ ಕೈಗೊಳ್ಳಲಾಗಿದೆ ಮತ್ತು ಈ ಪ್ರತಿಯೊಂದು ದೇವಸ್ಥಾನದ ಸುಧಾರಣೆಗಾಗಿ ಖರ್ಚಾದ ಹಣವೆಷ್ಟು;

ಇ) 2010–2011 ರ ಸಾಲಿನಲ್ಲಿ ಯಾವ ಯಾವ ದೇವಸ್ಥಾನಗಳ ಸುಧಾರಣೆ ಕೈಗೊಳ್ಳುವ ಯೋಜನೆ ಸರ್ಕಾರದ ಮುಂದಿದೆ;

ಈ) ಇದಕ್ಕೆ ನಿಗದಿಯಾದ ಹಣವೆಷ್ಟು (ಇಂಡಿ ವಿಧಾನಸಭಾ ಕ್ಷೇತ್ರದ ಮಾಹಿತಿ ನೀಡುವುದು)?

ಶ್ರೀ ವಿ.ಎಸ್. ಆಚಾರ್ಯ (ಗೃಹ ಹಾಗೂ ಮುಜರಾಯಿ ಸಚಿವರು) :

ಅ) ಒಟ್ಟು 27.

(ವಿವರ ಅನುಬಂಧದಲ್ಲಿ ಸಲ್ಲಿಸಿದೆ).

ಆ) ಸುಧಾರಣೆ ಕೈಗೊಳ್ಳಲಾದ ದೇವಸ್ಥಾನಗಳು ಒಟ್ಟು 04.

ದೇವಸ್ಥಾನಗಳ ಸುಧಾರಣೆ ಕೈಗೊಳ್ಳಲು ಅನುದಾನನ ಮಂಜೂರು ಮಾಡಲಾದ ಮತ್ತು ಖರ್ಚು ಮಾಡಲಾದ ವಿವರ ಈ ಕೆಳಕಂಡಂತೆ ಇರುತ್ತದೆ:–

ಅನುದಾನ ಮಂಜೂರು ಮಾಡಲಾದ ಧಾರ್ಮಿಕ ಸಂಸ್ಥೆಗಳ ವಿವರ:

1) ವಿಠಲ ಪಾಂಡುರಂಗ, ಕಲ್ಯಾಣ ನಗರ ಇಂಡಿ ರೂ. 1.00 ಲಕ್ಷ
2) ಬೀರಲಿಂಗೇಶ್ವರ, ಶಿರಕನಹಳ್ಳಿ ರೂ. 1.00 ಲಕ್ಷ
3) ಹನುಮಂತ ದೇವಸ್ಥಾನ, ಹಿರೇರೂಗಿ ರೂ. 1.00 ಲಕ್ಷ
4) ದುರ್ಗಮ್ಮ ದೇವಸ್ಥಾನ, ಬಸನಾಳ ರೂ. 0.50 ಲಕ್ಷ

ದೇವಸ್ಥಾನದ ಸುಧಾರಣೆಗಾಗಿ ಖರ್ಚು ಮಾಡಲಾದ ವಿವರ :–

1) ಬೀರಲಿಂಗೇಶ್ವರ, ಶಿರಕನಹಳ್ಳಿ ರೂ. 1.00 ಲಕ್ಷ
2) ಹನುಮಂತ ದೇವಸ್ಥಾನ, ಹಿರೇರೂಗಿ ರೂ. 1.00 ಲಕ್ಷ

ಅನುದಾನ ಬಿಡುಗಡೆ ಮಾಡಲು ಬಾಕಿ ಇರುವ ದೇವಸ್ಥಾನಗಳ ವಿವರ:–

1) ವಿಠಲ ಪಾಂಡುರಂಗ, ಕಲ್ಯಾಣ ನಗರ ಇಂಡಿ ರೂ. 1.00 ಲಕ್ಷ
2) ದುರ್ಗಮ್ಮ ದೇವಸ್ಥಾನ, ಬಸನಾಳ ರೂ. 0.50 ಲಕ್ಷ

ಇ) ಇಂಡಿ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಧ್ಯ ಅಂತಹ ಯಾವುದೇ ಯೋಜನೆಗಳು ಸರ್ಕಾರದ ಮುಂದೆ ಇರುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಅನುಬಂಧ

ಇಂಡಿ ವಿಧಾನಸಭಾ ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕ ಮುಜರಾಯಿ ದೇವಸ್ಥಾನಗಳ ವಿವರ

ಕ್ರ ಸಂ.	ಗ್ರಾಮ	ದೇವಸ್ಥಾನಗಳ ಹೆಸರು
1	ಮಿರಗಿ	ಶ್ರೀ ಸಂಗಮೇಶ್ವರ ದೇವಸ್ಥಾನ
2	ತಡವಲಗಾ	ಶ್ರೀ ಮರಳಸಿದ್ದೇಶ್ವರ ದೇವಸ್ಥಾನ
3	ಇಂಡಿ	ಶ್ರೀ ಮಂಗಮ್ಮ ಮತ್ತು ಲಕ್ಷ್ಮೀ ದೇವಸ್ಥಾನ
4	ಮಸಳಿ	ಶ್ರೀ ಬಸವೇಶ್ವರ ದೇವಸ್ಥಾನ
5	ಗೊರನಾಳ	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ
6	ಇಂಗಳಗಿ	ಶ್ರೀ ಪ್ರಭುಲಿಂಗ ದೇವಸ್ಥಾನ
7	ಚಿಕ್ಕಮಣ್ಣೂರು	ಶ್ರೀ ಸಂಗಮೇಶ್ವರ ದೇವಸ್ಥಾನ
8	ಅಗರಖೇಡ	ಶ್ರೀ ಶಂಕರಲಿಂಗ ದೇವಸ್ಥಾನ
9	ಅಥರ್ಗಾ	ಶ್ರೀ ಮಾರುತಿ ದೇವಸ್ಥಾನ
10	ಹಿರೇಬೆವನೂರ	ಶ್ರೀ ಮಲ್ಲಿಕಾರ್ಜುನ ದೇವಸ್ಥಾನ
11	ಲೋಣಿ	ಶ್ರೀ ಸಿದ್ದೇಶ್ವರ ದೇವಸ್ಥಾನ
12	ಅಥರ್ಗಾ	ಶ್ರೀ ಕೂಲಂಕಾರೇಶ್ವರ ದೇವಸ್ಥಾನ
13	ಲಚ್ಯಾಣ	ಶ್ರೀ ಹನುಮಂತ ದೇವಸ್ಥಾನ
14	ಭತಗುಣಕಿ	ಶ್ರೀ ಬಸವೇಶ್ವರ ಟ್ರಸ್ಟ್ ದೇವಸ್ಥಾನ
15	ಅಹಿರಸಂಗ	ಶ್ರೀ ಹನುಮಂತ ದೇವಸ್ಥಾನ

16	ಮೈಲಾರ	ಶ್ರೀ ಮಹಾದೇವರ ದೇವಸ್ಥಾನ
17	ಅಥರ್ಗಾ	ಶ್ರೀ ಅಮೋಘಸಿದ್ದೇಶ್ವರ ದೇವಸ್ಥಾನ
18	ಭೂಯ್ಯಾರ	ಶ್ರೀ ರಾಯಪ್ಪ ಮಠ ದೇವಸ್ಥಾನ
19	ಚೌಡಿಹಾಳ	ಶ್ರೀ ಲಕ್ಕವ್ವ ದೇವಸ್ಥಾನ
20	ಚೌಡಿಹಾಳ	ಶ್ರೀ ಕಲಮೇಶ್ವರ ದೇವಸ್ಥಾನ
21	ಏಳಗಿ	ಶ್ರೀ ವೀರಭದ್ರ ದೇವಸ್ಥಾನ
22	ಚೌಡಿಹಾಳ	ಶ್ರೀ ಮರಗಮ್ಮದೇವಿ ದೇವಸ್ಥಾನ
23	ಹಿರೇಮಸಳಿ	ಶ್ರೀ ಈರಮುತ್ಯಾ ದೇವಸ್ಥಾನ
24	ಸಂಗೋಗಿ	ಶ್ರೀ ನರಸಿಂಹ ದೇವಸ್ಥಾನ
25	ಅಂಜುಟಗಿ	ಶ್ರೀ ಕಲ್ಮೇಶ್ವರ ದೇವಸ್ಥಾನ
26	ಹಿರೇರೂಗಿ	ಶ್ರೀ ಹನಮಂತ ದೇವಸ್ಥಾನ
27	ಲೋಣಿ	ಶ್ರೀ ಬೈರಸಿದ್ದೇಶ್ವರ ದೇವಸ್ಥಾನ

ಇಂಡಿ ಕ್ಷೇತ್ರಕ್ಕೆ ಹೊಸ ವಿದ್ಯುತ್ ಪರಿವರ್ತಕಗಳ ಪೂರೈಕೆ

126 (420) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ವಿಧಾನಸಭಾ ಕ್ಷೇತ್ರಕ್ಕೆ 1.06.2008 ರಿಂದ 31.12.2009ರ ಅವಧಿಯಲ್ಲಿ ಎಷ್ಟು ಹೊಸ ಪರಿವರ್ತಕ (Transformer) ಗಳನ್ನು ನೀಡಲಾಗಿದೆ?

ಆ) ಇಂಡಿ ವಿಧಾನ ಸಭಾ ಕ್ಷೇತ್ರದಲ್ಲಿ 1.06.2008 ರಿಂದ 31.12.2009ರ ಅವಧಿಯಲ್ಲಿ ಎಷ್ಟು ಪರಿವರ್ತಕಗಳು (Transformer) ದುರಸ್ತಿಗಾಗಿ ಬಂದಿದ್ದವು?